ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ

ಸಿಸಿ.ನಂ.***373/2020***

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀ ರವಿ ಎನ್. ಎನ್. | ಚಾಸಾಃ 1 |
| ತಂದೆಯ ಹೆಸರುಃ | ನಿಂಗಪ್ಪ | ಪ್ರಾಸಾಃ 1 |
| ವಯಸ್ಸುಃ | 42 ವರ್ಷ | |
| ಉದ್ಯೋಗಃ | ಪೋಲೀಸ್ ಉಪ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ , ಕಾರವಾರ | |
| ವಾಸಃ | ಕಾರವಾರ | |

ದಿನಾಂಕಃ28/02/2026 ರಂದು ಪ್ರಮಾಣವಚನ ಬೋಧಿಸಲಾಯಿತು.

ಃಃ ಮುಖ್ಯ ವಿಚಾರಣೆಃಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃಃ

ನಾನು ನವೆಂಬರ್ 2019 ರಿಂದ ಜೂನ್ 2021 ರವರೆಗೆ ಕೊಪ್ಪ ಪೋಲಿಸ್ ಠಾಣೆಯಲ್ಲಿ ಉಪ ನಿರೀಕ್ಷಕರರಾಗಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕಃ24/05/2020 ರಂದು ಸಂಜೆ 4-30 ರ ಸಮಯದಲ್ಲಿ ನಾನು ಠಾಣಾ ಸಿಬ್ಬಂದಿಗಳಾದ ಚಾಸಾ 2 ಮತ್ತು 3 ರವರೊಂದಿಗೆ ಇಲಾಖಾ ವಾಹನದಲ್ಲಿ ಕೊಪ್ಪ ಪಟ್ಟಣದಲ್ಲಿ ಗಸ್ತಿನಲ್ಲಿದ್ದಾಗ ನುಗ್ಗಿ ಗ್ರಾಮ ಪಂಚಾಯಿತಿಯ ಬಪ್ಪುಂಜೆ ಕೈಮರದ ಉಮೇಶ್ ಎಂಬುವವರು ತಮ್ಮ ಚಿಲ್ಲರೆ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಇಟ್ಟು ಕೊಂಡು ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು ಅದರಂತೆ ಬಪ್ಪುಂಜೆ ಕೈಮರಕ್ಕೆ ಹಾಜರಾಗಿ ಅಲ್ಲಿದ್ದ ಚಾಸಾ 5 ಮತ್ತು 6 ರವರಿಗೆ ವಿಚಾರ ತಿಳಿಸಿ ಮಹಜರ್ ಸಾಕ್ಷಿಗಳಾಗುವಂತೆ ಕೋರಿ ಅವರು ಒಪ್ಪಿದ ಮೇರೆಗೆ ಅವರಿಗೆ ನೋಟಿಸ್ ಜಾರಿ ಮಾಡಿ ಉಮೇಶ್ ಅವರ ಅಂಗಡಿಯ ಹಿಂಬಾಗಕ್ಕೆ ಹೊಗಿ ನೋಡಲಾಗಿ ಒಬ್ಬ ವ್ಯಕ್ತಿ ಒಂದು ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ ಮದ್ಯದ ಟೆಟ್ರಾ ಪ್ಯಾಕುಗಳನ್ನು ಇಟ್ಟುಕೊಂಡು ಗಿರಾಕಿಗಳಿಗೆ ಮಾರಾಟ ಮಾಡುತ್ತಿರುವುದು ಕಂಡುಬಂತು. ನಮ್ಮನ್ನು

ನೋಡಿ ಸದರಿ ಗಿರಾಕಿಗಳು ಓಡಿಹೋಗಿರುತ್ತಾರೆ. ನಂತರ ಆರೋಪಿಯನ್ನು ಹಿಡಿದು ವಿಚಾರಣೆ ಮಾಡಲಾಗಿ ತನ್ನ ಹೆಸರು ಉಮೇಶ್ ಬಿನ್ ಸುಧಾಕರ ಎಂದು ತಿಳಿಸಿದ್ದು ಮದ್ಯ ಮಾರಾಟ ಮಾಡಲು ಪರವಾನಿಗೆಯ ಬಗ್ಗೆ ವಿಚಾರಿಸಿದಾಗ ಯಾವುದೆ ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತಾರೆ. ನಂತರ ನ್ಯಾಯಾಲಯದಿಂದ ಶೋಧನಾ ಸಮುಚಿತವನ್ನು ಪಡೆಯಲು ಸಮಾಯಾವಕಾಶ ಸ್ಥಳದಲ್ಲಿ ಶೋಧನಾ ಸಮುಚಿತವನ್ನು ತಯಾರಿಸಿಕೊಂಡಿರುತ್ತೇವೆ. ನಂತರ ಸ್ಥಳದಲ್ಲಿ ಒಂದು ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲ ಇದ್ದು ಅದರಲ್ಲಿ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ 90 ಎಂ ಎಲ್ನ 15 ಟೆಟ್ರಾ ಪ್ಯಾಕುಗಳು ಇದ್ದು ನಂತರ ಸದರಿ ಮದ್ಯವನ್ನು ವಶಕ್ಕೆ ಪಡೆದು ಎಫ್ ಎಸ್ ಎಲ್ ಗೆ ಕಳುಹಿಸಲು ಅದಕ್ಕೆ ಪಿ ಎಂಬ ಸೀಲ್ ಮಾಡಿ ನಂತರ ಆರೋಪಿತನಲ್ಲಿ ಮದ್ಯ ಮಾರಾಟದಿಂದ ಬಂದ ಹಣವನ್ನು ಕೇಳಿದಾಗ 100 ರ 2 ಹಾಗೂ 50 ರ 5 ನೋಟುಗಳನ್ನು ಒಟ್ಟು 450 ರೂ. ಹಣ ಮದ್ಯ ಮಾರಾಟ ಬಂದಿದ್ದಾಗಿ ತಿಳಿಸಿ ಹಾಜರುಪಡಿಸಿದ್ದರಿಂದ ಅದನ್ನು ಮುಂದಿನ ಕ್ರಮಕ್ಕಾಗಿ ವಶಕ್ಕೆ ಪಡೆದಿರುತ್ತೇನೆ. ನಂತರ ಸ್ಥಳದಲ್ಲಿದ್ದ 4 ಪ್ಲಾಸ್ಟಿಕ್ ಲೋಟವನ್ನು ಪರಿಶೀಲಿಸಿದಾಗ ಅದರಲ್ಲಿ ಮದ್ಯದ ವಾಸನೆ ಇರುವುದು ಕಂಡುಬಂದಿದ್ದು ಈ ಬಗ್ಗೆ ಆರೋಪಿಯನ್ನು ವಿಚಾರಿಸಿದಾಗ ಟೆಟ್ರಾ ಪ್ಯಾಕಿನಲ್ಲಿದ್ದ ಮದ್ಯವನ್ನು ಲೋಟಕ್ಕೆ ಹಾಕಿ ಗಿರಾಕಿಗಳಿಗೆ ಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ಸ್ಥಳದಲ್ಲಿದ್ದ 2 ಖಾಲಿ ಟೆಟ್ರಾ ಪ್ಯಾಕುಗಳನ್ನು ಪ್ರತ್ಯೇಕವಾಗಿ ಹಾಗೂ ಲೋಟಗಳನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಹಾಕಿ ಪ್ಯಾಕ್ ಮಾಡಿ ಪಿ ಎಂಬ ಅಕ್ಷರದಿಂದ ಸೀಲ್ ಮಾಡಿ ಸಂಜೆ 5-15 ರಿಂದ 6-15 ರವರೆಗೂ ಸ್ಥಳ ಮಹಜರ್ ಅನ್ನು ಜರುಗಿಸಿ ಆ ಸಮಯದಲ್ಲಿ ಫೋಟೊ ತೆಗೆದಿರುತ್ತೇನೆ. ನಂತರ ಮಾಲು, ವರದಿ ಹಾಗೂ ಆರೋಪಿಯೊಂದಿಗೆ ಠಾಣೆಗೆ ಹಾಜರಾಗಿ ಚಾಸಾ 7 ರವರ ಮುಂದೆ ಮಾಲು, ವರದಿ ಹಾಗೂ ಆರೋಪಿಯನ್ನು ಹಾಜರುಪಡಿಸಿರುತ್ತೇನೆ.

ದಿಃ07/09/2020 ರಂದು ಪ್ರಕರಣದ ಕಡತವನ್ನು ಚಾಸಾ 10 ರವರಿಂದ ಪಡೆದು ತನಿಖೆ ಮುಂದುವರೆಸಿರುತ್ತೇನೆ. ಆರೋಪಿತನ ಚಿಲ್ಲರೆ ಅಂಗಡಿಯ ಅಸೆಸ್ ಮೆಂಟನ್ನು ಪಿಡಿಓ ಅವರಿಂದ ಪಡೆದಿರುತ್ತೇನೆ.

ದಿಃ30/09/2020 ರಂದು ಚಾಸಾ 7 ರವರ ಹೇಳಿಕೆ ಪಡೆದಿರುತ್ತೇನೆ. ನಂತರ

ಪ್ರಕರಣದಲ್ಲಿ ತನಿಖೆಯು ಮುಕ್ತಾಯವಾಗಿದ್ದರಿಂದ ಆರೋಪಿಯ ವಿರದ್ಧ ಆರೋಪ ಸಾಬೀತಾದ ಕಾರಣ ಅವರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿ ನ್ಯಾಯಾಲಯಕ್ಕೂ ಹಾಗೂ ನನ್ನ ಮೇಲಾಧಿಕಾರಿಗಳಿಗೂ ನಿವೇದಿಸಿಕೊಂಡಿರುತ್ತೇನೆ. ನಂತರ ಚಾಸಾ 8 ರವರಿಂದ ಕಲಂ 65 ಬಿ ರೀತ್ಯಾ ದೃಡೀಕರಣ ಪಡೆದಿರುತ್ತೇನೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಯಿತು. ಸದರಿ ದಾಖಲೆ ಸ್ಥಳ ಮಹಜರಾಗಿದ್ದು ಅದನ್ನು ನಿಪಿ.1 ಎಂದೂ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದೂ ಗುರುತಿಸಲಾಯಿತು.

ಒಂದು ಪೋಟೋವನ್ನು ನಿಪಿ.2 ಎಂದೂ, ಒಂದು ಸಿಡಿಯನ್ನು ನಿಪಿ.3 ಎಂದು ಗುರುತಿಸಲಾಯಿತು. ಶೋಧನಾ ಸಮುಚಿತವನ್ನು ನಿಪಿ.4 ಎಂದೂ, ಸಾಕ್ಷಿಯ ಸಹಿಯನ್ನು ನಿಫಿ.4(ಎ) ಎಂದೂ, ವರದಿನ್ನು ನಿಪಿ.5 ಎಂದೂ, ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದೂ , ದೃಡೀಕರಣ ಪತ್ರವನ್ನು ನಿಪಿ.6 ಎಂದೂ, ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದೂ, ಪಿಡಿಒ ಅವರು ನೀಡಿರುವ ವರದಿಯನ್ನು ನಿಪಿ.7 ಎಂದೂ, ಸಾಕ್ಷಿಯ ಸಹಿಯನ್ನು ನಿಪಿ.7(ಎ) ಎಂದೂ, ಪಂಚತಂತ್ರವನ್ನು ನಿಪಿ.8 ಎಂದೂ, ಸಾಕ್ಷಿಯ ಸಹಿಯನ್ನು ನಿಪಿ.8(ಎ) ಎಂದೂ ಗುರುತಿಸಲಾಯಿತು.

ನ್ಯಾಯಾಲಯದ ಮುಂದಿರುವ ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ 90 ಎಂ ಎಲ್ ನ 15 ಟೆಟ್ರಾ ಪ್ಯಾಕುಗಳನ್ನು ಎಂಒ 1 ಎಂದೂ, ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿಯ 90 ಎಂ ಎಲ್ ನ ಖಾಲಿ ಟೆಟ್ರಾ ಪ್ಯಾಕುಗಳನ್ನು ಎಂಒ 2 ಎಂದೂ ಗುರುತಿಸಲಾಯಿತು. ಒಂದು ಕೆಂಪು ಬಣ್ಣದ ಪ್ಲಾಸ್ಟಿಕ್ ಕವರನ್ನು ಎಂಒ 3 ಹಾಗೂ 450 ರೂಗಳನ್ನು ಎಂಒ 4 ಎಂದು ಗುರುತಿಸಲಾಯಿತು. 4 ಖಾಲಿ ಪ್ಲಾಸ್ಟಿಕ್ ಲೋಟಗಳನ್ನು ಎಂಒ 5 ಎಂದು ಗುರುತಿಸಲಾಯಿತು.

(ನ್ಯಾಯಾಲಯದ ಮುಂದೆ ಆರೋಪಿ ಗೈರು ಹಾಜರಿದ್ದು ಅವರ ಪರವಾಗಿ ಅವರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು ಅವರ ಗುರುತಿನ ಬಗ್ಗೆ ಯಾವುದೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.)

ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಂಎಸ ್ ಬಿ. ವಕೀಲರವರಿಂದಃ

ದಿಃ24/05/2020 ರಂದು ಕೊಪ್ಪ ಪಟ್ಟಣದಲ್ಲಿ ಗಸ್ತು ಕರ್ತವ್ಯದಲ್ಲಿದ್ದೆನು.

ಮಾಹಿತಿ ಬಂದಿತ್ತು ಎನ್ನಲಾದ ಸಮಯದಲ್ಲಿ ನಿರ್ದಿಷ್ಟವಾಗಿ ಯಾವ ಸ್ಥಳದಲ್ಲಿ ಕೃತ್ಯ ನಡೆದಿದೆ ಎನ್ನಲಾದ ಸ್ಥಳಕ್ಕೂ ಕೊಪ್ಪ ಪಟ್ಟಣಕ್ಕೂ ಸುಮಾರು 10 ಕಿಮಿ ಅಂತರ ಇರುತ್ತದೆ.

ಪಂಚರುಗಳು ಕೈಮರ ಸರ್ಕಲ್ ನ ಬಳಿ ಇದ್ದರು. ಸದರಿ ಸರ್ಕಲ್ ನಿಂದ ಕೃತ್ಯ ನಡೆದಿದೆ ಎನ್ನಲಾದ ಸ್ಥಳ ಸುಮಾರು 200-400 ಮೀಟರ್ ದೂರ ಇರುತ್ತದೆ. ನಮ್ಮ ಇಲಾಖಾ ಜೀಪನ್ನು ಕೃತ್ಯ ನಡೆದಿದೆ ಎನ್ನಲಾದ ಸ್ಥಳದಿಂದ ಸುಮಾರು 200 ಮೀಟರ್ ದೂರದಲ್ಲಿ ನಿಲ್ಲಿಸಿದ್ದೆವು. ಬಪ್ಪಂಜೆ ಕೈಮರ ಸರ್ಕಲ್ ಸುಮಾರು ಅಂಗಡಿ ವಾಸದ ಮನೆಗಳಿಂದ ಕೂಡಿರುತ್ತದೆ ಎಂದರೆ ಸರಿ. ಆರೋಪಿಯು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ವಿಚಾರವಾಗಿ ಮೊದಲು ನಾನೇ ನೋಡಿರುತ್ತೇನೆ ಎನ್ನುತ್ತೇನೆ. ಕೃತ್ಯ ನಡೆದಿದೆ ಎನ್ನಲಾದ ಸ್ಥಳ ದಲ್ಲಿ ಸುಮಾರು 2-3 ಜನ ಗ್ರಾಹಕರಿದ್ದರು. ಸದರಿ ಗ್ರಾಹಕರನ್ನು ನಾವು ಹಿಡಿದು ವಿಚಾರಿಸಿರುವುದಿಲ್ಲ. ಸದರಿ ಗ್ರಾಹಕರು ಓಡಿಹೋಗಿರುತ್ತಾರೆ. ಸದರಿ ಅಂಗಡಿ ಚಿಲ್ಲರೆ ಅಂಗಡಿಯಾಗಿರುತ್ತದೆ. ಸದರಿ ಅಂಗಡಿಯು ಯಾರಿಗೆ ಸೇರಿದ್ದು ಎಂಬ ಬಗ್ಗೆ ನಾನು ವಿಚಾರಿಸಿರುತ್ತೇನೆ.

ಮಹಜರ್ ಸಮಯದಲ್ಲಿ ಅಕ್ಕಪಕ್ಕದ ಮನೆಯವರನ್ನು ಕರೆದು ವಿಚಾರಿಸಿರುವುದಿಲ್ಲ.

ಮುದ್ದೆ ಮಾಲುಗಳು ನಿರ್ದಿಷ್ಟವಾಗಿ ಯಾವ ಸ್ಥಳದಲ್ಲಿ ಇದ್ದವು ಎಂದರೆ ಅಂಗಡಿಯ ಹಿಂಬಾಗದಲ್ಲಿ ಇದ್ದವು. ಮುದ್ದೆ ಮಾಲುಗಳನ್ನು ನಾನು ಸ್ಥಳದಲ್ಲಿ ವಶಕ್ಕೆ ಪಡೆದ ಬಗ್ಗೆ ಯಾವುದೆ ವಿಶೇಷ ಗುರುತಿಲ್ಲಎಂದರೆ ಸರಿ. ಮುದ್ದೆ ಮಾಲು 5 ರ ಮೇಲೆ ನನ್ನ ಸಹಿ ಅಥವಾ ಪಂಚರ ಸಹಿ ಇರುವುದಿಲ್ಲ ಎಂದರೆ ಸರಿ.

ನ್ಯಾಯಾಲಯದ ಮುಂದಿರುವ ಪ್ಲಾಸ್ಟಿಕ್ ಚೀಲ ಗುಲಾಬಿ ಬಣ್ಣದ ಪ್ಲಾಸ್ಟಿಕ್ ಚೀಲವಾಗಿರುತ್ತದೆ ಎಂದರೆ ಸರಿ. ನಾನು ಸ್ಥಳದಲ್ಲಿ ವಶಕ್ಕೆ ಪಡೆದ ಬಗ್ಗೆ ಯಾವುದೆ ವಿಶೇಷ ಗುರುತಿಲ್ಲ ಎಂದರೆ ಸರಿ. ಸದರಿ ಪ್ಲಾಸ್ಟಿಕ್ ಚೀಲವನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿ ಯಾವುದೆ ಮದ್ಯವನ್ನು ಹೊಂದಿ ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

ನಿಪಿ.2 ಅನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ.2 ರಲ್ಲಿ ಯಾವುದೆ ಕೆಂಪು ಬಣ್ಣದ ಪ್ಲಾಸ್ಟಿಕ್ ಚೀಲ ಕಂಡುಬರುತ್ತಿಲ್ಲ ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾನೇ ಪಿರ್ಯಾದುದಾರನಾಗಿ ಅಂತಿಮ ದೋಷಾರೋಪಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿ.

ಕಲಂ 65 ಬಿ ದೃಡೀಕರಣವನ್ನು ಪ್ರಕರಣಕ್ಕಾಗಿ ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿ ಯಾವುದೆ ತಪ್ಪು ಮಾಡದೆ ಇದ್ದರೂ ಸಹಾ ಸುಳ್ಳು ದೋಷಾರೋಪಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ, ಪ್ರಕರಣಕ್ಕೂ, ಮುದ್ದೆ ಮಾಲಿಗೂ ಯಾವುದೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಃ ಇಲ್ಲ.</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಓ.

ಸಹಿ/-
(ನಂದಿನಿ ಎಂ ಎನ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ